ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ", ಕೇಂದ್ರ ಕಛೇರಿ,
ಶಾಂತಿನಗರ, ಬೆಂಗಳೂರು – 560 027.
ದೂರವಾಣಿ ಸಂಖ್ಯೆ : 080-22221321
ವೆಬ್‌ಸೈಟ್: ksrtc.karnataka.gov.in

Karnataka State Road Transport Corporation
"Transport House", Central Offices,
Shanthinagar, Bengaluru-560027.
Tel : 080-2222132
Website: ksrtc.karnataka.gov.in

**ಸಂ.ಕರಾಸಾ/ಕೇಕ/ಸಂ/ಸಾ/ಎಂ-4/ 860 /2023-24** **ದಿನಾಂಕ:08 -06-2023.**

ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು,
ಕ.ರಾ.ರ.ಸಾ.ನಿಗಮ,

**'ಈ ದಿನ'**

ಮಾನ್ಯರೆ,

ವಿಷಯ:- ರಾಜ್ಯ ಸಾರಿಗೆ ಸಂಸ್ಥೆಯ ಸಾರಿಗೆಗಳಲ್ಲಿ ಮಹಿಳೆಯರಿಗೆ ಉಚಿತವಾಗಿ ಪ್ರಯಾಣಿಸುವ ಶಕ್ತಿ ಯೋಜನೆಯನ್ನು ದಿನಾಂಕ 11.06.2023 ರಿಂದ ಜಾರಿಗೊಳಿಸುವ ಬಗ್ಗೆ.

ಉಲ್ಲೇಖ: 1. ಟಿಡಿ 18 ಟಿಸಿಬಿ 2023 ದಿನಾಂಕ: 05/06/2023
2. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 818 ದಿನಾಂಕ 07/06/2023.
3. ಸೂಕ್ತಾಧಿಕಾರಿಗಳಾದ ಮಾನ್ಯ ಅಧ್ಯಕ್ಷರು, ಕರಾರಸಾ ನಿಗಮ ರವರ ಆದೇಶ ದಿನಾಂಕ: 08.06.2023.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಶಕ್ತಿ ಯೋಜನೆಯಡಿ ರಾಜ್ಯದ ಎಲ್ಲಾ ಮಹಿಳಾ ಪ್ರಯಾಣಿಕರಿಗೆ ಉಚಿತವಾಗಿ ಪ್ರಯಾಣಿಸಲು ದಿನಾಂಕ 11.06.2023 ರಿಂದ ಜಾರಿಗೆ ಬರುವಂತೆ ಅನುಮೋದನೆ ನೀಡಿ ಆದೇಶಿಸಿದೆ ಹಾಗೂ ಈ ಬಗ್ಗೆ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 818 ದಿನಾಂಕ 07/06/2023 ರಲ್ಲಿ ಸೂಕ್ತ ಸೂಚನೆಗಳನ್ನು ನೀಡಲಾಗಿರುತ್ತದೆ.

ಸನ್ಮಾನ್ಯ ಮುಖ್ಯಮಂತ್ರಿರವರು ದಿನಾಂಕ 11.06.2023 ರಂದು ಬೆಳಿಗ್ಗೆ 11.00 ಗಂಟೆಗೆ ವಿಧಾನಸೌಧ, ಬೆಂಗಳೂರಿನಲ್ಲಿ ಶಕ್ತಿ ಯೋಜನೆಯನ್ನು ಲೋಕಾರ್ಪಣೆಗೊಳಿಸುತ್ತಿದ್ದಾರೆ. ಸದರಿ ಯೋಜನೆಯನ್ನು ಎಲ್ಲಾ ಜಿಲ್ಲೆ/ತಾಲ್ಲೂಕುಗಳಲ್ಲಿ ಲೋಕರ್ಪಣೆಗೊಳಿಸುವ ಸಂಬಂಧ ತಮ್ಮ ವಿಭಾಗದ ವತಿಯಿಂದ ಈ ಕೆಳಕಂಡಂತೆ ಕ್ರಮಕೈಕೊಳ್ಳಲು ತಿಳಿಸಲಾಗಿರುತ್ತದೆ.

1. ಎಲ್ಲಾ ಜಿಲ್ಲಾ ಕೇಂದ್ರ/ತಾಲ್ಲೂಕು ಕೇಂದ್ರಗಳ ಬಸ್ಸು ನಿಲ್ದಾಣಗಳಲ್ಲಿ ದಿನಾಂಕ 11.06.2023 ರಂದು ಮಧ್ಯಾಹ್ನ 12.30 ಗಂಟೆಗೆ ಕಾರ್ಯಕ್ರಮವನ್ನು ಆಯೋಜಿಸಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯದ 'ಶಕ್ತಿ' ಯೋಜನೆಯನ್ನು ಲೋಕಾರ್ಪಣೆ ಮಾಡಲು ಕ್ರಮ ಕೈಗೊಳ್ಳುವುದು.
2. ಜಿಲ್ಲಾ ಕೇಂದ್ರಗಳ ಬಸ್ಸು ನಿಲ್ದಾಣಗಳಲ್ಲಿ ಸ್ಥಳೀಯ ಮಾನ್ಯ ಸಚಿವರು, ಸ್ಥಳೀಯ ಮಾನ್ಯ ಶಾಸಕರು ಹಾಗೂ ಜಿಲ್ಲಾಧಿಕಾರಿಗಳ ಉಪಸ್ಥಿತಿಯಲ್ಲಿ ಅವಶ್ಯ protocol ಪಾಲಿಸಿ ಸಮಾರಂಭ ಆಯೋಜಿಸುವುದು. ಸಮಾರಂಭದಲ್ಲಿ ವಿಭಾಗದ ವಿಭಾಗ ನಿಯಂತ್ರಣಾಧಿಕಾರಿ ಹಾಗೂ ವಿಭಾಗದ ಅಧಿಕಾರಿಗಳು ಹಾಜರಿರುವುದು.
3. ತಾಲ್ಲೂಕು ಕೇಂದ್ರಗಳ ಬಸ್ಸು ನಿಲ್ದಾಣಗಳಲ್ಲಿ ಸ್ಥಳೀಯ ಮಾನ್ಯ ಶಾಸಕರು ಹಾಗೂ ತಹಸೀಲ್ದಾರರ ಉಪಸ್ಥಿತಿಯಲ್ಲಿ ಅವಶ್ಯ protocol ಪಾಲಿಸಿ ಸಮಾರಂಭ ಆಯೋಜಿಸುವುದು. ಘಟಕ ವ್ಯವಸ್ಥಾಪಕರು ಹಾಗೂ ಘಟಕದ ಉಸ್ತುವಾರಿ ಅಧಿಕಾರಿ ಹಾಜರಿರುವುದು.

2.,

Scanned by CamScanner

4. ಸದರಿ ಕಾರ್ಯಕ್ರಮಕ್ಕೆ ಮಹಿಳಾ ಪ್ರಯಾಣಿಕರನ್ನು ಆಹ್ವಾನಿಸಿ, ಜಿಲ್ಲಾ ಕೇಂದ್ರದಲ್ಲಿ 2 ಬಸ್ಸು ಹಾಗೂ ತಾಲ್ಲೂಕು ಕೇಂದ್ರದಲ್ಲಿ 1 ಬಸ್ಸಿನಂತೆ ಪ್ರತಿ ಬಸ್ಸು ನಿಲ್ದಾಣದಲ್ಲಿ ಸುಸಜ್ಜಿತವಾದ ಬಸ್‌ಗೆ ಅವಶ್ಯ ಹೂವಿನ ಹಾರಗಳಿಂದ ಶೃಂಗರಿಸಿ ಮಹಿಳಾ ಪ್ರಯಾಣಿಕರಿಗೆ ಗಣ್ಯ ವಕ್ತಿಗಳ ಮೂಲಕ ಇ.ಟಿ.ಎಂ. ಯಂತ್ರದ ಮೂಲಕ ಉಚಿತ ಟಿಕೇಟ್ ವಿತರಿಸುವ ಮೂಲಕ ಲೋಕಾರ್ಪಣೆಗೊಳಿಸುವುದು.
5. ಬಸ್ಸು ನಿಲ್ದಾಣಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಸಮಾರಂಭ ವೇದಿಕೆ ಏರ್ಪಡಿಸುವುದು ಹಾಗೂ ಶಕ್ತಿ ಯೋಜನೆ ಬಗ್ಗೆ ಪ್ರದರ್ಶಿಸುವ ಬ್ಯಾನರ್ ನಲ್ಲಿ ಅಳವಡಿಸಬೇಕಾದ ವಿಷಯದ ಬಗ್ಗೆ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ರವರಿಂದ ಮಾಹಿತಿ ಪಡೆಯುವುದು.
6. ಲೋಕಾರ್ಪಣೆಗೊಳಿಸುವ ಸಮಾರಂಭ ನಡೆಯುವ ಸ್ಥಳದಲ್ಲಿ ಮಾತ್ರ ಮಹಿಳಾ ಪ್ರಯಾಣಿಕರಿಗೆ ಒಂದು ಗುಲಾಬಿ ಹೂವು ನೀಡುವುದು.
7. ಪ್ರತಿ ಜಿಲ್ಲಾ ಕೇಂದ್ರ ಬಸ್ಸು ನಿಲ್ದಾಣದಲ್ಲಿನ ಸಮಾರಂಭಕ್ಕೆ ರೂ 1,00,000/- ಮತ್ತು ಪ್ರತಿ ತಾಲ್ಲೂಕು ಕೇಂದ್ರ ಬಸ್ಸು ನಿಲ್ದಾಣಕ್ಕೆ ರೂ 25,000/- ವೆಚ್ಚ ಮಾಡಲು ಅನುಮೋದನೆ ನೀಡಲಾಗಿದೆ.
8. ದಿನಾಂಕ: 11.06.2023 ರಂದು ಮಧ್ಯಾಹ್ನ 1:00 ಗಂಟೆಯ ನಂತರ ಎಲ್ಲಾ ಬಸ್ಸುಗಳಲ್ಲಿ ಯಾವುದೇ ಸಮಸ್ಯೆಗಳಿಲ್ಲದೇ ಮಹಿಳೆಯರಿಗೆ ಉಚಿತ ಪ್ರಯಾಣ ಟಿಕೇಟು ವಿತರಿಸಲು ಕ್ರಮ ಕೈಗೊಳ್ಳುವುದು.
9. ವಿಭಾಗೀಯ ನಿಯಂತ್ರಣಾಧಿಕಾರಿಗಳು ತಮ್ಮ ವಿಭಾಗದ ವ್ಯಾಪ್ತಿಯಲ್ಲಿ ನಡೆಯುವ ಸಮಾರಂಭದಲ್ಲಿ ಯಾವುದೇ ದೂರುಗಳಿಗೆ ಅಸ್ಪದ ನೀಡದಂತೆ ಅಗತ್ಯ ಮುಂಜಾಗ್ರುತಾ ಕ್ರಮ ವಹಿಸುವಂತೆ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾ)

<u>ಪ್ರತಿಯನ್ನು:</u> ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾ ನಿಗಮ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
<u>ಪ್ರತಿಯನ್ನು:</u> ಮುಖ್ಯ ಸಂಚಾರ ವ್ಯವಸ್ಥಾಪಕರು, ವಾಕರಸಾ ಸಂಸ್ಥೆ/ಕಕರಸಾ ನಿಗಮ, ಹುಬ್ಬಳ್ಳಿ/ಕಲಬುರಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
<u>ಪ್ರತಿಯನ್ನು:</u> ಮಾನ್ಯ ವ್ಯವಸ್ಥಾಪಕರು ನಿರ್ದೇಶಕರು/ನಿರ್ದೇಶಕರು (ಸಿ & ಜಾ) ರವರ ಹಿರಿಯ/ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ ಹಾಗೂ ಮಾನ್ಯರ ಅವಗಾಹನೆಗೆ ತರಲು ಕೋರಲಾಗಿದೆ.

Scanned by CamScanner